ಸಾಕ್ಷಿಯನ್ನು ದಿನಾಂಕ **20-04-2024** ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀಸವಾಲು - **3** ನೇ ಎದುರುದಾರರ ಪರ ಶ್ರೀ ಕೆ.ಡಿ.ಡಿ. ವಕೀಲರಿಂದಃ

ಮೋಟರ್ ಬೈಕ್ ನ ಆರ್ ಸಿ ನನ್ನ ಹೆಸರಿಗೆ ಇರುತ್ತದೆ. ಅದು 2017 ನೇ ಮಾಡಲ್. ಸದರಿ ಬೈಕ್ ಗೆ ವಿಮೆ ಮಾಡಿಸಲಾಗಿತ್ತು, ಈ ಬಗ್ಗೆ ಪಾಲಿಸಿಯನ್ನ ಹಾಜರುಪಡಿಸಿರುತ್ತೇನೆ. ನಮ್ಮ ಬೈಕ್ ನ ವಿಮಾ ಕಂಪನಿಯನ್ನು ಈ ಪ್ರಕರಣದಲ್ಲಿ ಪಾರ್ಟಿ ಮಾಡಿಲ್ಲ ಎಂದರೆ ಸರಿ. ನಾನು ವಾಹನವನ್ನ ರಿಪೇರಿಗಾಗಿ ವರ್ಕ್ ಶಾಪ್ ಗೆ ಬಿಟ್ಟಿದ್ದೆ. ಸದರಿ ಬೈಕ್ ನ ಶೋ ರೂಂ ಕುಶಾಲನಗರದಲ್ಲಿ ಇದೆ. ನಾನು ಎರಡನೇ ಮಾಲೀಕನಾಗಿ ಬೈಕನ್ನ ಕೊಂಡುಕೊಂಡಿದ್ದೆ. ವಿಮಾ ಕಂಪನಿಯವರು ನನ್ನ ಬೈಕನ್ನ ಬಂದು ನೋಡಿದರು ಆದರೆ ಏನು ಜಕಂ ಆಗಿದೆ ಎಂಬ ಬಗ್ಗೆ ಅಂದಾಜು ಪಟ್ಟಿ ಮಾಡಿಲ್ಲ. ಆರ್ ಟಿ ಓ ದವರು ಸಹ ನನ್ನ ಬೈಕನ್ನ ತಪಾಸಣೆ ಮಾಡಿಲ್ಲ. ಅಪಘಾತ ಸ್ಥಳದಿಂದ ಖಾಸಗಿ ವಾಹನದ ಮೂಲಕ ನಾವೇ ಬೈಕನ್ನ ಠಾಣೆಗೆ ತೆಗೆದುಕೊಂಡು ಹೋದೆವು. ಆ ದಿನ ಸದರಿ ವಾಹನವನ್ನ ಸಾಗಿಸಲು ಎಷ್ಟು ಖರ್ಚಾಯಿತು ಎಂದು ನನಗೆ ಗೊತ್ತಿಲ್ಲ, ಕಾರಣ ನಾನು ಆಸ್ಪತ್ರೆಯಲ್ಲಿ ಇದ್ದೆ. 10-15 ದಿನಗಳ ನಂತರ ನಾನು ವಾಹನವನ್ನ ರಿಪೇರಿಗೆ ಬಿಟ್ಟೆ. ಬೈಕ್ ಜಕಂ ಆಗಿರುವ ಬಗ್ಗೆ ಪೋಟೋಗಳು ಇರುತ್ತವೆ ಅವುಗಳನ್ನ ಹಾಜರುಪಡಿಸುತ್ತೇನೆ. ರಿಪೇರಿ ಮಾಡುವ ಮೊದಲಿಗೆ ಎಷ್ಟು ಖರ್ಚು ಆಗುತ್ತದೆ ಎಂಬ ಬಗ್ಗೆ ಬಾಯಿ ಮಾತಿನಲ್ಲಿ ಹೇಳಿರುತ್ತಾರೆ. ವಾಹವನ್ನ ತರಲು ನನ್ನ ಅಣ್ಣ ಹಣ ಪಾವತಿ ಮಾಡಿದ್ದಾರೆ. ಅದನ್ನ ಸ್ಥಳೀಯ ಪಿಕ್ ಅಪ್ ವಾಹನದ ಮಾಲೀಕರಿಗೆ ಪಾವತಿ ಮಾಡಿರುತ್ತಾರೆ. ಕುಶಾಲನಗರದ ಶೋ ರೂಂ ನಲ್ಲಿ ಎಸ್ಟಿಮೆಂಟ್ ಮಾಡಿರುವ ಬಗ್ಗೆ ದಾಖಲೆ ಪಡೆದಿಲ್ಲ. ನನ್ನ ವಾಹನಕ್ಕೆ 5 ಡ್ಯಾಮೇಜನ್ನು ಮಾತ್ರ ನನ್ನ ಹೇಳಿಕೆಯಲ್ಲಿ ನಮೂದಿಸಿದ್ದೇನೆ ಎಂದರೆ ಸರಿ. ಚಾಸಿ ಬೆಂಡಾಗಿರುವ ಬಗ್ಗೆ ನಮೂದಿಸಿಲ್ಲ ಎಂದರೆ ಸರಿ. MV ವರದಿಯಲ್ಲ್ಲೂ ಸಹ 5 ಜಕಂ ಆಗಿರುವ ಬಗ್ಗೆ ನಮೂದಾಗಿದೆ ಎಂದರೆ ಸರಿ. 5 ಜಕಂ ಗಳು ಸಣ್ಣ ಪುಟ್ಟ ಜಕಂಗಳು ಎಂದರೆ ಸರಿಯಲ್ಲ. ಇಂಜಿನ್ ಗೆ ಜಕಂ ಆಗಿರುವ ಬಗ್ಗೆ ಐಎಂವಿ ವರದಿಯಲ್ಲಿ ಇಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ತೋರಿಸಿರುವಂತೆ ಯಾವುದೇ ಖರ್ಚು ವೆಚ್ಚಗಳು ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-6 ಕೈ ಬರವಣಿಗೆಯಲ್ಲಿ ಇರುವ ಬಿಲ್ ಎಂದರೆ ಸರಿ. ವರ್ಕ್ ಶಾಪ್ ನಲ್ಲಿ ಕಂಪ್ಯೂಟರ್ ಇರಲಿಲ್ಲ ಆದ್ದರಿಂದ ಕಂಪ್ಯೂಟರ್ ಬಿಲ್ ತೆಗೆದುಕೊಳ್ಳಲು ಆಗಲಿಲ್ಲ. ನಾನು ನಗದು ಮೂಲಕ ಬಿಲ್ ಪಾವತಿ ಮಾಡಿರುತ್ತೇನೆ. ನಗದು ಕೊಟ್ಟಾಗ ರಶೀದಿ ಪಡೆಯಬೇಕು ಎಂದರೆ ಅದು ಅವರ ಬಳಿ ಇರಲಿಲ್ಲ. ನಾನು ಹೇಳಿರುವಂತೆ ನಿಪಿ-6 ರಲ್ಲಿ ತೋರಿಸಿರುವಷ್ಟು ಹಣ ರಿಪೇರಿಗೆ ಖರ್ಚು ಆಗಿಲ್ಲ ಎಂದರೆ ಸರಿಯಲ್ಲ ಮತ್ತು ಹಣ

ಖರ್ಚಾಗುವಷ್ಟು ಜಖಂ ಗಳು ನನ್ನ ಬೈಕ್ ಗೆ ಆಗಿಲ್ಲ ಎಂದರೆ ಸರಿಯಲ್ಲ. ನಿಪಿ-6 ನ್ನ ನಾನೇ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಬೈಕ್ ಗೆ ಚಾಸಿ ಆಗಲೀ ಇಂಜಿನ್ ಆಗಲೀ ಡ್ಯಾಮೇಜ್ ಆಗಿಲ್ಲ ಆದರೂ ದಾಖಲೆಗಳನ್ನ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರ ಪಡೆಯುವ ಸಲುವಾಗಿ ನಾನು ದಾಖಲೆಗಳನ್ನ ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಸದರಿ ಬೈಕನ್ನ ನಮ್ಮ ತಂದೆ ಚಲಾಯಿಸುತ್ತಿದ್ದರು, ಅವರ ಬಳಿ ಚಾಲನ ಪರವಾನಿಗೆ ಇರುತ್ತದೆ. ನನ್ನ ಬೈಕ್ ಬಿಟ್ಟರೆ ನನ್ನ ತಂದೆ ಬಳಿ ಬೇರೆ ಬೈಕ್ ಇರುವುದಿಲ್ಲ. ನಮ್ಮ ತಂದೆಗೆ ಚಾಲನ ಪರವಾನಿಗೆ ಇರಲಿಲ್ಲ ಆದ್ದರಿಂದ ಬೈಕ್ ಚಲಾಯಿಸಲು ಬರಲಿಲ್ಲ ಅವರಿಂದ ಅಪಘಾತ ಆಗಿದೆ ಎಂದರೆ ಸರಿಯಲ್ಲ. ಕಾರು ಅತೀ ವೇಗ ಮತ್ತು ಅಜಾಗರೂಕತೆಯಿಂದ ಬಂದು ಬೈಕ್ ಗೆ ಅಪಘಾತಪಡಿಸಿದೆ ಎಂದು ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸಾ. ಸ. ಇ. ಎ. ಒ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಎಂ.ಎ.ಸಿ.ಟಿ. ನ್ಯಾಯಾಧೀಶರು,
ಕೊಡಗು-ಮಡಿಕೇರಿ.